
ನನಗೆ ಸಾಮಾಜಿಕ ಸ್ಥಾನಮಾನವನ್ನು ಕೊಟ್ಟಿದೆ. ನನಗಿಂತ ಕಿರಿಯ ಲೇಖಕಿಯರನ್ನು ಉದ್ದೇಶಿಸಿ ಅನೇಕ ಬರಹಗಳನ್ನು ಬರೆದಿದ್ದೇನೆ. ಅವರು ತಮ್ಮ ಗುರಿಯೆಡೆಗೆ ಸಾಗುವ ದೃಢವಾದ ನಿಲುವನ್ನು ಹೊಂದಬೇಕು. ಪುರುಷಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಒಂದಿಷ್ಟು ಗೌರವ ಸಿಗಬೇಕು, ಜೀವನದಲ್ಲಿ ಅವರು ಪಡುವ ಶ್ರಮವನ್ನು ಗುರುತಿಸುವಂತಾಗಬೇಕು, ಮಾನವಪ್ರೀತಿಗೆ ಆದ್ಯತೆ ಇರಬೇಕು ಎಂಬ ಆಗ್ರಹದಲ್ಲಿ ನಾನು ಬರವಣಿಗೆ ಮಾಡಿದ್ದೇನೆ.

**3** ಬರಹಗಾರ್ತಿಯರು ಅಥವಾ ಮಹಿಳೆಯರು ಎದುರಿಸುವ ಯಾವುದೇ ಸವಾಲುಗಳು ಅವರು ವಾಸಿಸುವ ಪರಿಸರವನ್ನು ಅವಲಂಬಿಸಿರುತ್ತವೆ. ಹಿರಿಯ ಬರಹಗಾರ್ತಿಯರು ಸಾಮಾನ್ಯವಾಗಿ ಕೌಟುಂಬಿಕ ಜವಾಬ್ದಾರಿಗಳನ್ನು ನಿರ್ವಹಿಸಿಕೊಂಡು, ಮಕ್ಕಳ ಕಷ್ಟಸುಖವನ್ನು ನೋಡಿಕೊಂಡು, ವೈಯಕ್ತಿಕ ಬದುಕನ್ನು ತೂಗಿಸಿಕೊಂಡು ಬರವಣಿಗೆ ಮಾಡಬೇಕಿತ್ತು. ಅನೇಕರಿಗೆ ಸಾಮಾಜಿಕ ಕಟ್ಟುಪಾಡುಗಳೂ ಒಂದು ಸವಾಲಾಗಿ ಪರಿಣಮಿಸಿದ್ದವು. ಅಂತಹ ಕಟ್ಟುಪಾಡುಗಳು ಬರವಣಿಗೆಗೆ ತೊಡಕಾಗಿವೆ. ಇವೆಲ್ಲವನ್ನು ದಾಟುವ ಅವಕಾಶಗಳು ಇಂದು ದೊರೆತಿವೆ. ನಾನು ಮತ್ತು ಅಮ್ಮ ವಾಸಿಸುವ ವಾತಾವರಣ ಬರವಣಿಗೆಗೆ ಪೂರಕವಾಗಿದೆ. ನಾನಿನ್ನೂ ಈ ಕ್ಷೇತ್ರದಲ್ಲಿ ಅಂಬೆಗಾಲಿಡುತ್ತಿರುವ ಬರಹಗಾರ್ತಿಯಾದ್ದರಿಂದ ಸವಾಲುಗಳನ್ನೇನೂ ಎದುರಿಸಿಲ್ಲ.

**4** ನಾನು ಪ್ರಜ್ಞಾಪೂರ್ವಕವಾಗಿ ಮೊದಲು ನನ್ನ ಮಾತೃಭಾಷೆ, ಸಿಂಧಿಯಲ್ಲಿ ಬರೆಯಲು ನಿರ್ಧರಿಸಿದೆ. ನಂತರ ಇತರ ಭಾಷೆಗಳಲ್ಲಿಯೂ ಬರೆದೆ. ಆದರೆ ಮಾತೃಭಾಷೆಯಲ್ಲಿ ನಾನು ಬರೆಯಲು ಆದ್ಯತೆ ನೀಡಿದ್ದರಿಂದ ನನಗೆ ಬರವಣಿಗೆ ಹೆಚ್ಚು ಅರ್ಥವಾಗಿದೆ. ಯಾಕೆಂದರೆ, ಮಾತೃಭಾಷೆಯು ನಮ್ಮ ಸಮುದಾಯದ ಪ್ರಾಥಮಿಕ ಗುರುತು ಇದ್ದಂತೆ. ನನ್ನ ಭಾಷೆಯಲ್ಲಿ ಬರೆದ ಹಿರಿಯರ ಸಾಹಿತ್ಯವನ್ನು ಓದಿ, ನಮ್ಮದೇ ಸಾಹಿತ್ಯ ಪರಂಪರೆಯು ಎಷ್ಟು ಶ್ರೀಮಂತವಾದುದು ಎಂದು ಅರ್ಥ



ಮಾಡಿಕೊಳ್ಳುವುದು ಸಾಧ್ಯವಾಯಿತು. ಅಲ್ಲದೆ, ನಮ್ಮ ಸಂಪ್ರದಾಯದಲ್ಲಿ ಹಿಂದಿನ ಕಾಲದಲ್ಲಿ ಹಿರಿಯರು ಅನುಸರಿಸುತ್ತಿದ್ದ, ಈಗ ಮರೆತುಹೋದ ಅನೇಕ ವಿಚಾರಗಳನ್ನು ತಿಳಿದುಕೊಳ್ಳುವುದು ಸಾಧ್ಯವಾಯಿತು. ಇದೀಗ ನಾವು ಬರೆದ ವಿಚಾರಗಳನ್ನು ನಮ್ಮ ಸಮಕಾಲೀನರು ಮತ್ತು ಹಿರಿಯರು ಓದಲಿ ಎಂಬ ಆಶಯ ಮನದೊಳಗಿದೆ.

**5** ಸಮಾಜಕ್ಕೆ ಸಾಹಿತ್ಯವು ಮಹತ್ವದ ಕೊಡುಗೆಯನ್ನು ಕೊಡುತ್ತದೆ. ಬರವಣಿಗೆಯನ್ನು ನಾವು ಆಯ್ಕೆ ಮಾಡಿಕೊಂಡ ಬಳಿಕ ಓದುವ, ಬರೆಯುವ ಮತ್ತು ಆಲೋಚಿಸುವ ಪ್ರಕ್ರಿಯೆಯ ಜೊತೆಗೆ ಸಾಗುತ್ತೇವೆ. ಸಮಾಜದ ಕುರಿತು ತನ್ನ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ಬರೆಯುವ ಮೂಲಕ ಸ್ಪಂದಿಸುವುದು, ಇನ್ನೊಬ್ಬ ಲೇಖಕನ್ನು, ಅವರ ಅನಿಸಿಕೆಗಳನ್ನು ಗೌರವಿಸುವುದು ಮುಖ್ಯವೆಂದು ನಾನು ಭಾವಿಸುತ್ತೇನೆ.

**6** ಕನ್ನಡ ಭಾಷೆಯು ಕರ್ನಾಟಕದ ಅಧಿಕೃತ ಭಾಷೆಯೆಂದು ಗೊತ್ತು. ಅದರ ಹೊರತಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯು ಅನೇಕ ಮಂದಿಕನ್ನಡ ಸಾಹಿತಿಗಳಿಗೆ ದೊರೆತ ಬಗ್ಗೆ ಓದಿದ್ದೇನೆ.